

بِسۡمِ اللّٰہِ الرَّحۡمٰنِ الرَّحِیۡم

# ಕ್ಷಮಾಶೀಲತೆ ಸ್ವಾಯತ್ತ ಮಾಡಿಕೊಳ್ಳಿರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **23-09-2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ)**

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ಸಂದರ್ಭದಲ್ಲಿ ನೈಜ ಸತ್ಯ ವಿಶ್ವಾಸಿಯ ಚಿಹ್ನೆಯ ಬಗ್ಗೆ ವಿವರಿಸುತ್ತಾ ಹೇಳಿದರು: ವಾಸ್ತವಿಕವಾಗಿಯೂ ಸತ್ಯವಿಶ್ವಾಸಿಯಾಗಿರುವವನು ತನಗೆ ಏನನ್ನು ಇಚ್ಛಿಸುತ್ತಾನೋ ಅದನ್ನೇ ಅನ್ಯರಿಗೂ ಇಚ್ಛಿಸುತ್ತಾನೆ. ಇದು ಎಂತಹ ಮಾರ್ಗದರ್ಶಕ ತತ್ವವಾಗಿದೆ ಎಂದರೆ ಲೋಕದಲ್ಲಿ ಪ್ರತಿಯೊಂದು ಹಂತದಲ್ಲಿ, ಮನೆಯಿಂದ ಪ್ರಾರಂಭಿಸಿ ಅಂತರ್‌ರಾಷ್ಟ್ರೀಯ ಸಂಬಂಧದ ತನಕ ಪ್ರೀತಿ ಮತ್ತು ಸೌಹಾರ್ದದ ಬುನಾದಿಯನ್ನು ಹಾಕುವಂತಹದಾಗಿದೆ. ಇದು ಜಗಳಗಳನ್ನು ಕೊನೆಗೊಳಿಸುತ್ತದೆ. ಹೃದಯಗಳಲ್ಲಿ ಮೃದುತ್ವವನ್ನು ಹುಟ್ಟಿಸುತ್ತದೆ. ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸಿಕೊಡುವ ಕಡೆಗೆ ಗಮನ ಹರಿಸುವಂತೆ ಮಾಡುತ್ತದೆ. ನಾನು ಅನೇಕ ಸಂದರ್ಭಗಳಲ್ಲಿ ಅನ್ಯರ ಮುಂದೆ ಈ ವಿಷಯವನ್ನು ಪ್ರಸ್ತಾಪಿಸಿದಾಗ ಅವರು ಬಹಳ ಪ್ರಭಾವಿತರಾಗುತ್ತಾರೆ. ಆದರೆ ನಮ್ಮ ಉದ್ದೇಶ ಒಳ್ಳೆಯ ಮಾತುಗಳನ್ನು ಹೇಳಿ ಜನರನ್ನು ಪ್ರಭಾವಿತರನ್ನಾಗಿ ಮಾಡುವುದು ಮಾತ್ರವಲ್ಲ. ನಾವು ನಮ್ಮ ಕೆಲಸಗಳ ಮೂಲಕ ಇಸ್ಲಾಮೀ ಆಜ್ಞೆಗಳ ಸೌಂದರ್ಯವನ್ನು ಸಾಬೀತುಗೊಳಿಸಬೇಕಾಗಿದೆ. ಅನ್ಯರು ನಮ್ಮೊಂದಿಗೆ ಹೀಗೆ ಪ್ರಶ್ನಿಸಬಹುದಾಗಿದೆ: ನೀವು ಹೇಳುವುದು ಬಹಳ ಉತ್ತಮ ವಿಚಾರವಾಗಿದೆ. ಆದರೆ ನಿಮ್ಮವರಲ್ಲಿ ಎಷ್ಟು ಜನರು ಅದರ ಪ್ರಕಾರ ವರ್ತಿಸುವವರಾಗಿದ್ದಾರೆ ಎಂದು ಕೇಳಬಹುದು. ಸಂದರ್ಭ ದೊರಕಿದಾಗ ಸ್ವಾರ್ಥತೆಯಿಂದ ವರ್ತಿಸದವರು ಎಷ್ಟು ಜನರಿದ್ದಾರೆ. ಒಂದು ಮಾತು ಹೇಳುವವನು ಸ್ವತಃ ಆ ಮಾತಿನ ಪ್ರಕಾರ ವರ್ತಿಸುವಾಗ ಮಾತ್ರ ಆ ಮಾತಿನ ಸೌಂದರ್ಯ ಪ್ರಕಟವಾಗುತ್ತದೆ. ನಮ್ಮ ಮಾತು ಮತ್ತು ಕೃತ್ಯ ಒಂದೇ ರೀತಿಯಾಗಿ ಕಾಣಿಸುವಾಗ ಮಾತ್ರ ಜನರಿಗೆ ನಮ್ಮ ಪ್ರತ್ಯೇಕವಾದ ವೈಶಿಷ್ಟ್ಯವೇನೆಂದು ತಿಳಿಯುವುದು. ಜನರು ಕೇವಲ ನಮ್ಮ ಮಾತನ್ನು ಆಲಿಸುವವರಾಗಿರುವುದಿಲ್ಲ. ಅವರು ನಮ್ಮನ್ನು ನೋಡುತ್ತಲೂ ಇರುತ್ತಾರೆ.

ನಾವು ಧರ್ಮಕ್ಕೆ ಸಂಬಂಧಿಸಿ ಉನ್ನತ ನೈತಿಕ ಗುಣಗಳ ಬಗ್ಗೆ ಪ್ರಸ್ತಾಪಿಸುವಾಗ ಅನ್ಯರು ನಮ್ಮ ಕಡೆಗೆ ನೋಡುತ್ತಾರೆ– ನಾವು ಅವುಗಳಿಗೆ ಸಂಬಂಧಿಸಿ ಹೇಗೆ ವರ್ತಿಸುತ್ತೇವೆಂದು. ಈ ವಿಷಯವನ್ನು ಯಾರಿಗೂ ನಿರಾಕರಿಸಲು ಸಾಧ್ಯವಿಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸತ್ಯ ವಿಶ್ವಾಸಿಗಳು ಉನ್ನತ ಸ್ವಭಾವ ಗುಣಗಳನ್ನು ಹೊಂದಬೇಕೆಂದು ಹೇಳಿದರು. ಅವರು ಹೇಳಿದರು: ನೀವು ನೈಜ ಸತ್ಯ ವಿಶ್ವಾಸಿಯಾಗಿರುವುದರ ಬಗ್ಗೆ ತಿಳಿಯಲು ನಿಮ್ಮ ಸ್ವಭಾವ ಗುಣಗಳು ಉನ್ನತ ಮಟ್ಟದವುಗಳಾಗಿರಬೇಕು. ನೀವು ಒಬ್ಬರಿನ್ನೊಬ್ಬರ ಬಗ್ಗೆ ಹೊಂದಿರುವ ಭಾವನೆಗಳ ಮಟ್ಟ ಉನ್ನತವಾಗಿರಬೇಕು. ನೀವು ಯಾವ ವಸ್ತುವನ್ನು ನಿಮಗೆ ಇಷ್ಟಪಡುತ್ತೀರೋ ಅದನ್ನು ನೀವು ಬೇರೆಯವರಿಗೂ ಇಷ್ಟಪಡುವವರಾಗಬೇಕು ಎಂಬುದೇ ಆ ಉನ್ನತ ಮಟ್ಟವಾಗಿದೆ. ನೀವು ನಿಮ್ಮ ಹಕ್ಕುಗಳನ್ನು ಪಡೆಯಲು 'ನ್ಯಾಯಬೇಕು' ಎಂದು ಬೊಬ್ಬಿಟ್ಟು, ಅನ್ಯರಿಗೆ ಅವರ ಹಕ್ಕುಗಳನ್ನು ಈಡೇರಿಸಿಕೊಡುವಾಗ ನಕಾರಾತ್ಮಕವಾಗಿ ವರ್ತಿಸುವವರಾಗಬಾರದು.

ಆದುದರಿಂದ ನಾವು ನಮ್ಮ ಹಕ್ಕುಗಳನ್ನು ಪಡೆಯುವ ಬಗ್ಗೆ ಆತಂಕಭರಿತರಾಗಿರುವ ಹಾಗೆಯೇ ಅನ್ಯರ ಹಕ್ಕುಗಳನ್ನು ಈಡೇರಿಸಿಕೊಡಲು ಅದೇ ಮಟ್ಟವನ್ನು ಕಾಪಾಡಬೇಕು. ನಾವು ಏನಾದರೂ ತಪ್ಪು ಮಾಡಿದರೆ ನಾವು ನಮಗೋಸ್ಕರ ಬಯಸುವುದೇನೆಂದರೆ ನಮ್ಮ ತಪ್ಪು ಕ್ಷಮಿಸಲ್ಪಡಬೇಕು, ನಮಗೆ ಯಾವುದಾದರೂ ಶಿಕ್ಷೆ ದೊರೆಯಬಾರದು, ಎಂದಾಗಿದೆ. ಇದೇ ರೀತಿ ಬೇರೆ ಒಬ್ಬ ತಪ್ಪು ಮಾಡಿದಾಗ ಅದರಿಂದ ನಮಗೆ ತೊಂದರೆ ಆಗುವುದಾದರೆ ಆ ವ್ಯಕ್ತಿ ಅಪರಾಧಿಯಾಗಿರುವ ಅಭ್ಯಾಸ ಹೊಂದಿದವನಾಗಿರದಿದ್ದರೆ ಮತ್ತು ಪದೇ ಪದೇ ತಪ್ಪುಗಳನ್ನು ಪುನರಾವರ್ತಿಸುವವನಾಗಿರದಿದ್ದರೆ ಅಂತಹ ವ್ಯಕ್ತಿಗೆ ಕ್ಷಮೆ ನೀಡಬೇಕಾಗಿದೆ. ಆದರೆ ಯಾವುದಾದರೂ ತಪ್ಪು ಜಮಾಅತಿನ ಹಿತಕ್ಕೆ ಹಾನಿ ಉಂಟುಮಾಡುವುದಾಗಿದ್ದರೆ ಆ ತಪ್ಪು ವೈಯ್ಯಕ್ತಿಕ ತಪ್ಪೆಂದು ಗಣಿಸಲಾಗದು. ಆಗ ಅದು ಸಾಮೂದಾಯಿಕ ತಪ್ಪೆಂದು ಗಣಿಸಲ್ಪಡುತ್ತದೆ. ಅಂತಹ ತಪ್ಪುಗಳ ಬಗ್ಗೆ ತೀರ್ಮಾನ ಜಮಾಅತ್ ಮಾಡಬೇಕಾಗುತ್ತದೆ. ಅದು ಯಾವುದಾದರೂ ವ್ಯಕ್ತಿ ಮಾಡಬಹುದಾದ ತೀರ್ಮಾನವಲ್ಲ.

ನಾನು ಹೇಳುತ್ತಿರುವುದೇನೆಂದರೆ, ದೈನಂದಿನ ಪರಸ್ಪರ ವ್ಯವಹಾರಗಳಲ್ಲಿ ನಾವು ನಮಗೆ ಸಿಗಬೇಕಾದ ಹಕ್ಕುಗಳು ಎಂದು ಭಾವಿಸುವ ರೀತಿಯಲ್ಲಿ ನಾವು ಅನ್ಯರಿಗೂ ಹಕ್ಕುಗಳನ್ನು ನೀಡುತ್ತಿರುವೆವೋ ಅಥವಾ ಹಾಗೆ ಹಕ್ಕುಗಳನ್ನು ನೀಡಲು ಬಯಸುತ್ತಿರುವೆವೋ ಎಂಬುದರ ಬಗ್ಗೆಯಾಗಿದೆ. ಇದಕ್ಕೆ ಸಂಬಂಧಿಸಿ ಮೂಲ ಘಟಕ ಮನೆಯಾಗಿದೆ. ಬಂಧು ಬಾಂಧವರು, ಸಹೋದರ ಸಹೋದರಿಯರು ಇದರಲ್ಲಿ ಸೇರಿದ್ದಾರೆ. ಚಿಕ್ಕ ಮಟ್ಟದಲ್ಲಿ ಚಿಕ್ಕ ವಲಯದಲ್ಲಿ ಇದರ ಬಗ್ಗೆ ಲಕ್ಷ್ಯ ನೀಡಿದರೆ ಸಮಾಜದಲ್ಲಿ ಸಹ ವಿಶಾಲವಾಗಿ ಇದೇ ರೀತಿಯ ಯೋಚನೆ ವ್ಯಾಪಿಸುವುದು. ಸ್ವಾರ್ಥ ಹಿತಾಸಕ್ತಿಗಳು ಕೊನೆಗೊಳ್ಳುವುವು. ಹಕ್ಕುಗಳನ್ನು ಕೊಡುವ ಬಗ್ಗೆ ಚರ್ಚೆಗಳು ಹೆಚ್ಚಾಗುವುವು. ಕ್ಷಮಿಸುವ ಮನೋಭಾವ ವರ್ಧಿಸುವುದು. ಶಿಕ್ಷೆ ನೀಡುವ ಮತ್ತು ಶಿಕ್ಷೆ ನೀಡಿಸುವ ಮನೋಭಾವ ಕಡಿಮೆಯಾಗುತ್ತಾ ಹೋಗುವುದು. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಬಾಹ್ಯ ಹಕ್ಕುಗಳ ಮತ್ತು ಆವಶ್ಯಕತೆಗಳ ಬಗ್ಗೆ ಲಕ್ಷ್ಯ ನೀಡಲು ಹೇಳಿರುವುದರ ಜೊತೆಗೆ ಕ್ಷಮಿಸುವ ಮನೋಭಾವ ಹೊಂದುವ ಬಗ್ಗೆಯೂ ಗಮನ ಹರಿಸಿದ್ದಾನೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದ್ದಾನೆ: **ಅಲ್ಲಝೀನ ಯುನ್‌ಫಿಖೂನ ಫಿಸ್ಸರ್ರಾಯಿ ವಝ್ಝರ್ರಾಯಿ ವಲ್‌ಕಾಝಿಮೀನಲ್ ಗೈಝ ವಲ್‌ಆಫೀನ ಅನಿನ್ನಾಸ್ ವಲ್ಲಾಹು ಯುಹಿಬ್ಬುಲ್ ಮುಹ್‌ಸಿನೀನ್**. ಅವರು ಸುಖದ ಕಾಲದಲ್ಲಿಯೂ

ಕಷ್ಟದ ಕಾಲದಲ್ಲಿಯೂ ಖರ್ಚು ಮಾಡುತ್ತಾರೆ. ಅವರು ಕೋಪವನ್ನು ತಗ್ಗಿಸುವವರಾಗಿದ್ದಾರೆ ಮತ್ತು ಜನರಿಗೆ ಕ್ಷಮಿಸುವವರಾಗಿದ್ದಾರೆ. ಅಲ್ಲಾಹನು ಔದಾರ್ಯ ಪೂರ್ಣವಾಗಿ ವರ್ತಿಸುವವರನ್ನು ಪ್ರೀತಿಸುತ್ತಾನೆ.

ಪವಿತ್ರ ಖುರ್‌ಆನಿನ ಈ ವಚನದಲ್ಲಿ ಆವಶ್ಯಕತೆ ಇರುವ ಜನರ ಹಕ್ಕುಗಳನ್ನು ಈಡೇರಿಸಿ ಕೊಡಲು ಖರ್ಚು ಮಾಡುವ ಬಗ್ಗೆ ಅಲ್ಲಾಹನು ಗಮನ ಹರಿಸಿದ್ದಾನೆ. ನಂತರ ಅಲ್ಲಾಹನು ಹೇಳುತ್ತಾನೆ: ಔದಾರ್ಯವಂತರ ಚಿಹ್ನೆ– ಅವರು ಕೋಪವನ್ನು ನಿಯಂತ್ರಿಸುತ್ತಾರೆ. ಇದು ಸಾಮಾನ್ಯ ವಿಷಯವೇನೂ ಅಲ್ಲ. ಪ್ರತಿಯೊಂದು ರೀತಿಯ ಕೋಪವನ್ನು ಮತ್ತು ಪ್ರತೀಕಾರ ಮನೋಭಾವನೆಯನ್ನೂ ಹೃದಯದಿಂದ ಹೊರಗೆ ಹಾಕಬೇಕು. ಇದು ಬಹಳ ದೊಡ್ಡ ವಿಷಯವೇ ಆಗಿದೆ. ಸಿಟ್ಟಾಗಬಾರದು, ಪ್ರತೀಕಾರ ಮಾಡುವ ಭಾವನೆಯನ್ನು ಹೃದಯದಿಂದ ಹೊರಗೆ ಹಾಕಬೇಕು. ಸಿಟ್ಟಿನ ಮನೋಭಾವ ನೀಗಿಸಿದರೆ ಮಾತ್ರ ಸಾಕಾಗಲಾರದು, ತಪ್ಪು ಮಾಡಿದವನಿಗೆ ಏನಾದರೂ ಉಪಕಾರ ಸಹ ಮಾಡಬೇಕು. ಇದು ಬಹಳ ದೊಡ್ಡ ವಿಷಯವಾಗಿದೆ. ಸತ್ಯ ವಿಶ್ವಾಸಿಗಳು ಹೀಗೆ ಆಗಬೇಕೆಂದು ಅಲ್ಲಾಹನು ಇಚ್ಛಿಸುತ್ತಾನೆ.

ಹಝ್ರತ್ ಹಸನ್ ರಝಿಯಲ್ಲಾಹು ಅನ್‌ಹುರವರಿಗೆ ಸಂಬಂಧಿಸಿದ ಒಂದು ಘಟನೆ ಈ ರೀತಿ ವರದಿಯಾಗಿದೆ. ಅವರ ಒಬ್ಬ ಸೇವಕ ಏನೋ ತಪ್ಪು ಮಾಡಿದಾಗ ಹಝ್ರತ್ ಹಸನ್(ರ) ಕೋಪಗೊಂಡು ಶಿಕ್ಷೆ ನೀಡಲು ಮುಂದಾದರು. ಆಗ ಆ ಸೇವಕ ಪವಿತ್ರ ಖುರ್‌ಆನಿನ ವಚನದ ಭಾಗವಾದ **ವಲ್ ಕಾಝಿಮೀನಲ್ ಗೈಝು** ಎಂದು ಉಚ್ಚರಿಸಿದನು. ಸತ್ಯವಿಶ್ವಾಸಿಗಳು ಕೋಪವನ್ನು ನಿಯಂತ್ರಿಸುತ್ತಾರೆ ಎಂದು ಅದರ ಅರ್ಥವಾಗಿದೆ. ಇದನ್ನು ಕೇಳಿದಾಗ ಹಝ್ರತ್ ಹಸನ್(ರ) ಶಿಕ್ಷೆ ನೀಡಲು ಎತ್ತಿದ ಕೈಯನ್ನು ತಗ್ಗಿಸಿದರು. ಆಗ ಆ ಸೇವಕ ಹೇಳಿದನು **ವಲ್ ಆಫೀನ್** ಸತ್ಯವಿಶ್ವಾಸಿಗಳು ಕ್ಷಮಿಸುವವರಾಗಿರುತ್ತಾರೆ. ಆಗ ಹಝ್ರತ್ ಹಸನ್(ರ) ಅಲ್ಲಾಹನ ಆಜ್ಞೆ ಪ್ರಕಾರ ಹೇಳಿದರು 'ಹೋಗು ನಾನು ನಿನ್ನನ್ನು ಕ್ಷಮಿಸಿದೆ'. ಆಗ ಆ ಸೇವಕ ಹೇಳಿದನು: **ವಲ್ಲಾಹು ಯುಹಿಬ್ಬುಲ್ ಮಹ್‌ಸಿನೀನ್** ಅಲ್ಲಾಹನು ಔದಾರ್ಯವಂತರನ್ನು ಪ್ರೀತಿಸುತಾನೆಂದು. ಆಗ ಹಝ್ರತ್ ಹಸನ್(ರ) ಹೇಳಿದರು: ಹೋಗು, ನಾನು ನಿನ್ನನ್ನು ಸ್ವತಂತ್ರನನ್ನಾಗಿ ಮಾಡಿದ್ದೇನೆ. ನೀನು ನಿನಿಗಿಷ್ಟವಿರುವಲ್ಲಿಗೆ ಹೋಗು ಎಂದು ಹೇಳಿದರು.

ಅಲ್ಲಾಹನ ಪ್ರೀತಿಯನ್ನು ಗಳಿಸುವ ಮನೋಭಾವ ಹೊಂದಿದವರು ಕೇವಲ ತಪ್ಪನ್ನು ಕ್ಷಮಿಸುವವರಾಗಿರುವುದಿಲ್ಲ. ಅವರು ತಪ್ಪು ಮಾಡಿದವರೊಂದಿಗೆ ಔದಾರ್ಯದಿಂದಲೂ ವರ್ತಿಸುತ್ತಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ವಚನವನ್ನು ವಿವರಿಸುತ್ತಾ ಒಂದೆಡೆ ಹೀಗೆ ಹೇಳಿದ್ದಾರೆ: ನೆನಪಿಟ್ಟುಕೊಳ್ಳಿರಿ, ಯಾರು ಕಠಿಣವಾಗಿ ವರ್ತಿಸುತ್ತಾನೋ ಮತ್ತು ಸಿಟ್ಟು ಹೊಂದಿರುತ್ತಾನೋ ಅವನ ನಾಲಗೆಯಿಂದ ಜ್ಞಾನದ ಮಾತುಗಳು ಖಂಡಿತವಾಗಿಯೂ ಹೊರಬರಲಾರವು. ಅವನ ಹೃದಯ ಸುಜ್ಞಾನದಿಂದ ವಂಚಿತವಾಗುತ್ತದೆ. ಅವನು ತನ್ನ ಎದುರಾಳಿಯ ಮುಂದೆ ಬೇಗನೆ ಕೋಪಗೊಂಡು ತನ್ನನ್ನೇ ಮರೆತು ಬಿಡುತ್ತಾನೆ. ಕೊಳಕು ಮನಸ್ಸು ಮತ್ತು ಹತೋಟಿಯಿಲ್ಲದ ನಾಲಗೆ ಸೂಕ್ಷ್ಮ ಜ್ಞಾನದ ಕಾರಂಜಿಯಿಂದ ವಂಚಿತವಾಗುತ್ತದೆ. ಸಿಟ್ಟು ಮತ್ತು ಜಾಣ್ಮೆ ಒಟ್ಟಿಗೆ ಸೇರಲಾರವು. ಬಹಳ ಸಿಟ್ಟಾದವನ ಬುದ್ಧಿ ಮಂದವಾಗುತ್ತದೆ. ತಿಳುವಳಿಕೆ ಮಂಕಾಗುತ್ತದೆ. ಅವನಿಗೆ ಎಂದೂ ಜಯ ಸಿಗಲಾರದು. ಸಹಾಯವೂ ಲಭಿಸಲಾರದು. ಸಿಟ್ಟು ಎಂಬುದು ಅರೆ ಹುಚ್ಚಾಗಿದೆ. ಅದು ಹೆಚ್ಚಾದರೆ ಪೂರ್ಣ ಹುಚ್ಚನಾಗಬಹುದು. ನೀವು ನೆನಪಿಡಿರಿ, ವಿವೇಕ ಮತ್ತು ಆವೇಶ ಇವುಗಳ ಮಧ್ಯೆ ಅಪಾಯಕರ ದ್ವೇಷವಿದೆ. ಆವೇಶ ಮತ್ತು ಕೋಪ ಉಂಟಾದರೆ ವಿವೇಕ ನೆಲೆನಿಲ್ಲಲಾರದು. ಆದರೆ ಸಹನೆ ತೋರುವವನಿಗೆ ಮತ್ತು ಸಹಿಷ್ಣುತೆಯ ಉದಾಹರಣೆ ತೋರಿಸುವವನಿಗೆ ಒಂದು ಪ್ರಕಾಶ ನೀಡಲಾಗುತ್ತಿದೆ. ಅದರ ಮೂಲಕ ಬುದ್ಧಿ ಮತ್ತು ಯೋಚನೆಯ ಶಕ್ತಿಗಳಲ್ಲಿ ಒಂದು ಹೊಸ ಪ್ರಕಾಶ ಹುಟ್ಟುತ್ತದೆ. ಅನಂತರ ಪ್ರಕಾಶದಿಂದ ಪ್ರಕಾಶ ಉದ್ಭವಿಸುತ್ತದೆ. ಆದರೆ ಸಿಟ್ಟು ಮತ್ತು ಆವೇಶದ ಸ್ಥಿತಿಯಲ್ಲಿ ಹೃದಯ ಮತ್ತು ಬುದ್ಧಿ ಅಂಧಕಾರಮಯವಾಗುವುದರಿಂದ ಅಂಧಕಾರದಿಂದ ಅಂಧಕಾರವೇ ಹುಟ್ಟುತ್ತದೆ.

ಕೆಲವು ಸಂದರ್ಭಗಳಲ್ಲಿ ಕಠಿಣವಾಗಿ ವರ್ತಿಸಬೇಕಾಗುತ್ತದೆ. ಆದರೆ ಸಿಟ್ಟಿನಿಂದ ಕಠಿಣವಾಗಿ ವರ್ತಿಸುವುದು ಧರ್ಮ ಬದ್ಧವಲ್ಲ. ಇಸ್ಲಾಮಿನಲ್ಲಿ ಶಿಕ್ಷೆಗಳ ಪರಿಕಲ್ಪನೆ ಇದೆ. ಆದರೆ ಶಿಕ್ಷೆ ನೀಡುವ ಬಗ್ಗೆ ಕಾನೂನು ಕಾಯಿದೆಗಳಿವೆ. ಸಿಟ್ಟಿನಿಂದ ತುಂಬಿದಾಗ ಶಿಕ್ಷೆ ನೀಡುವುದು ಜ್ಞಾನ ಮತ್ತು ನ್ಯಾಯದಿಂದ ದೂರ ಸರಿಸುತ್ತದೆ.

ಅಲ್ಲಾಹನು ಸಿಟ್ಟನ್ನು ನಿಯಂತ್ರಿಸಲು ಹೇಳಿದ ನಂತರ ಕ್ಷಮಿಸಲು ಹೇಳಿದುದು ಯಾವುದೇ ಉದ್ದೇಶ ರಹಿತವಾಗಿಯಲ್ಲ. ಕ್ಷಮಿಸುತ್ತಾ ಹೋಗಬೇಕೆಂದು ಹೇಳಿರುವನಾದರೂ ಶಿಕ್ಷೆ ಮತ್ತು ಕ್ಷಮೆಯ ಉದ್ದೇಶ ಲಕ್ಷ್ಯವನ್ನು ವಿವರಿಸಿ, ಅದರಂತೆ ತೀರ್ಪು ನೀಡಲು ಅಲ್ಲಾಹನು ಹೇಳಿದ್ದಾನೆ. ಅಲ್ಲಾಹನು ಹೇಳುತ್ತಾನೆ: **ಜಝಾಉ ಸಯ್ಯಿಅತಿನ್ ಸಯ್ಯಿಅತುನ್ ಮಿಸ್‌ಲುಹಾ ಫಮನ್ ಅಫಾ ವಅಸ್‌ಲಹ ಫಅಜ್‌ರುಹೂ ಅಲಲ್ಲಾಹಿ ಇನ್ನಹೂ ಲಾಯುಹಿಬ್ಬುಝ್ಝಾಲಿಮೀನ್.** ಕೆಡುಕಿಗೆ ಶಿಕ್ಷೆ, ಮಾಡಿದ ಕೆಡುಕಿಗೆ ಸಮವಾಗಿದೆ. ಆದರೆ ಯಾರಾದರೂ ಕ್ಷಮಿಸುವುದಾದರೆ ಮತ್ತು ಅದರಿಂದ ಸುಧಾರಣೆ ಆಗುವುದಾದರೆ ಅದರ ಪ್ರತಿಫಲ ಅಲ್ಲಾಹನ ಹೊಣೆಗಾರಿಕೆಯಾಗಿದೆ. ನಿಶ್ಚಯವಾಗಿಯೂ ಅವನು ದೌರ್ಜನ್ಯಗಾರರನ್ನು ಇಷ್ಟಪಡುವುದಿಲ್ಲ.

ಮುಖ್ಯವಾದುದು ಅಪರಾಧಿಗೆ ಅವನ ಅಪರಾಧದ ಬಗ್ಗೆ ಪ್ರಜ್ಞೆ ಮೂಡಿಸಿ ಅವನನ್ನು ಸುಧಾರಣೆ ಮಾಡುವುದಾಗಿದೆ. ಪ್ರತೀಕಾರ ಮಾಡುವುದು, ಮೊಕದ್ದಮೆಗಳಲ್ಲಿ ಸಿಕ್ಕಿ ಬೀಳುವಂತೆ ಮಾಡುವುದು ನಮ್ಮ ಹಣವನ್ನು ನಾಶ ಮಾಡುತ್ತದೆಯಲ್ಲದೆ ಬೇರೆಯವರ ಹಣವನ್ನೂ ನಾಶವಾಗುವಂತೆ ಮಾಡುತ್ತದೆ. ನಮ್ಮ ಸಮಯವನ್ನು ಹಾಳು ಮಾಡುವುದು ಮತ್ತು ಬೇರೆಯವರ ಸಮಯವನ್ನೂ ಹಾಳು ಮಾಡುವುದಾಗಿದೆ. ಜಮಾಅತಿನ ವಿಭಾಗಗಳ ಬಗ್ಗೆ ಹೇಳುವುದಾದರೆ, ಅಲ್ಲಿ ಕೆಟ್ಟ ಸಂಶಯಗಳಿಗೆ ಕಾರಣವಾಗುತ್ತದೆ. ಆದುದರಿಂದ ಕ್ಷಮಿಸುವುದರಿಂದ ಸುಧಾರಣೆ ಆಗುವುದಾದರೆ ಕ್ಷಮಿಸಬೇಕು. ಶಿಕ್ಷೆ ನೀಡುವುದು ಸುಧಾರಣೆಗೆ ಆವಶ್ಯಕವಾದರೆ ಶಿಕ್ಷೆ ನೀಡುವುದೇ ಉತ್ತಮವಾಗಿದೆ. ಅನಂತರ ಸಂಬಂಧಿತ ವಿಭಾಗಗಳ ಕಡೆಗೆ ವಿಷಯವನ್ನು ಒಯ್ಯಬೇಕು. ವಿವೇಕಯುತವಾದ ಈ ಆಜ್ಞೆಯ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅನೇಕ ಸ್ಥಳಗಳಲ್ಲಿ ಬರೆದಿದ್ದಾರೆ. ಒಂದು ಸ್ಥಳದಲ್ಲಿ ಹೀಗೆ ಹೇಳಿದ್ದಾರೆ:

ನ್ಯಾಯಪಾಲನೆಯ ದೃಷ್ಟಿಯಲ್ಲಿ ಹೇಳುವುದಾದರೆ, ಪ್ರತಿಯೊಂದು ಕೆಡುಕಿನ ಶಿಕ್ಷೆ, ಅಷ್ಟು ಕೆಡುಕು ಮಾಡುವುದಾಗಿದೆ. ಆದರೆ ಒಬ್ಬನು ಅಪರಾಧಿಯನ್ನು ಕ್ಷಮಿಸುವುದಾದರೆ ಮತ್ತು ಅದರಿಂದ ಅಪರಾಧಿಯಲ್ಲಿ ಸುಧಾರಣೆ ಉಂಟಾಗುವುದಾದರೆ, ಅವನು ಇನ್ನೂ ಹೆಚ್ಚು ಅಪರಾಧ ಮಾಡಲು ಪ್ರೇರಿತನಾಗುವುದಿಲ್ಲವಾದರೆ, ಅಂತಹ ವ್ಯಕ್ತಿಯನ್ನು ಕ್ಷಮಿಸಿದವನಿಗೆ ಅಲ್ಲಾಹನು ಪ್ರತಿಫಲ ನೀಡುವನು.

ಒಟ್ಟಿನಲ್ಲಿ, ಕ್ಷಮಿಸಬೇಕಾದುದು ಯಾವಾಗ ಎಂದರೆ ಅಪರಾಧ ಮಾಡಿದವನು ಮುಂದೆ ತಪ್ಪು ಕೆಲಸ ಮಾಡಲಾರನು ಎಂದು ತೋರಬೇಕು. ಕೆಲವರು ಅಪರಾಧ ಮಾಡುವ ಅಭ್ಯಾಸವನ್ನು ಹೊಂದಿದವರಾಗಿರುತ್ತಾರೆ. ಪ್ರತಿಸಾರಿ ಅಪರಾಧ ಮಾಡಿ ಕ್ಷಮೆ ಕೇಳುತ್ತಾರೆ. ಅಂತಹ ಜನರಿಗೆ ಶಿಕ್ಷೆ ನೀಡುವುದು ಆವಶ್ಯಕವಾಗಿದೆ. ಆದರೆ ಶಿಕ್ಷೆ ಹೇಗೆ ನೀಡಬೇಕೆಂದರೆ ಅದರಿಂದ ಅಪರಾಧಿಯ ಸುಧಾರಣೆ ಆಗುವಂತಿರಬೇಕು.

ಇಸ್ಲಾಮೀ ಶಿಕ್ಷೆ ಮತ್ತು ಕ್ಷಮಾದಾನದ ಉದ್ದೇಶ ಅಪರಾಧಿಯ ಸುಧಾರಣೆ ಆಗಿದೆ. ಕಣ್ಣು ಮುಚ್ಚಿ ಪ್ರತಿಯೊಬ್ಬನಿಗೆ ಕ್ಷಮೆ ನೀಡಬೇಕೆಂದು ಅಲ್ಲಾಹನು ಇಚ್ಛಿಸುವುದಿಲ್ಲ. ಸಿಟ್ಟುಭರಿತನಾಗಿ ಶಿಕ್ಷೆ ನೀಡುವುದನ್ನೂ ಅಲ್ಲಾಹನು ಇಷ್ಟಪಡುವುದಿಲ್ಲ. ಬರೇ ಕ್ಷಮಿಸುತ್ತಾ ಇರುವುದರಿಂದ ಸಮಾಜದಲ್ಲಿ ಅಸ್ತವ್ಯಸ್ತತೆ ತಲೆದೋರುತ್ತದೆ. ಅದೇ ರೀತಿ ಬರೇ ಶಿಕ್ಷೆ ನೀಡುತ್ತಾ ಇರುವುದರಿಂದಲೂ ಕೋಪ ಮತ್ತು ಅಸೂಯೆ ವರ್ಧಿಸುತ್ತದೆ. ಸಮಾಜದಲ್ಲಿ ತಾತ್ಸಾರ ಭಾವನೆಯ ಗೋಡೆಗಳು ಕಟ್ಟಲ್ಪಡುತ್ತವೆ. ಅಶಾಂತಿ ಹಬ್ಬುತ್ತದೆ.

ಇದು ಇಸ್ಲಾಮಿನ ಸೈಧಾಂತಿಕ ಉಪದೇಶವಾಗಿದೆ. ಈಗ ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಎಷ್ಟರ ಮಟ್ಟಿಗೆ ಕ್ಷಮೆ ನೀಡುತ್ತಿದ್ದರೆಂದು ನೋಡುವ. ಕ್ಷಮಿಸುವ ಅತ್ಯಂತ ಉನ್ನತ ಉದಾಹರಣೆ ನಮಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೀವಿತದಲ್ಲಿ ಲಭಿಸುತ್ತದೆ. ಯಾರಿಗೆ ಶಿಕ್ಷೆ ವಿಧಿಸುವ ತೀರ್ಪು ನೀಡಲಾಗಿತ್ತೋ ಅಂತಹ ಅಪರಾಧಿಗಳನ್ನೂ ಸಹ ಅವರು ಕ್ಷಮಿಸಿದರು. ಅನ್ಯರಿಗೆ ಅಪರಾಧ ಮಾಡಿದವರನ್ನಲ್ಲ ಅವರು ಕ್ಷಮಿಸಿದ್ದು, ಅವರು ತನ್ನ ಮಗಳ ಹಂತಕನಿಗೂ ಕ್ಷಮೆ ನೀಡಿದರು. ಏಕೆಂದರೆ ಅಪರಾಧಿಯಲ್ಲಿ ಪಶ್ಚಾತಾಪ ಮತ್ತು ಸುಧಾರಣೆ ಉಂಟಾಗಿತ್ತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪುತ್ರಿ ಹಝ್ರತ್ ಝೈನಬ ಮಕ್ಕದಿಂದ ಮದೀನಕ್ಕೆ ವಲಸೆ ಹೋಗುತ್ತಾ ಇದ್ದಾಗ ಹಬ್ಬಾರ್ ಇಬ್ನು ಅಸ್‌ವದ್ ಈಟಿಯಿಂದ ಅವರಿಗೆ ತಿವಿದನು. ಆಗ ಹಝ್ರತ್ ಝೈನಬ ಗರ್ಭಿಣಿಯಾಗಿದ್ದರು. ಆಕ್ರಮಣದ ಕಾರಣ ಗರ್ಭಪಾತವಾಯಿತು. ಅವರಿಗೆ ಗಾಯವಾಗಿತ್ತು. ಆ ಗಾಯದ ಕಾರಣದಿಂದಲೇ ಅವರು ಅನಂತರ ನಿಧನ ಹೊಂದಿದರು. ಈ ಅಪರಾಧದ ಕಾರಣ ಹಬ್ಬಾರನಿಗೆ ಮರಣ ದಂಡನೆಯ ಶಿಕ್ಷೆ ಘೋಷಿಸಲಾಗಿತ್ತು. ಮಕ್ಕ ಫತಹ್ ವೇಳೆಯಲ್ಲಿ ಹಬ್ಬಾರ್ ಅಲ್ಲಿಂದ ಓಡಿ ಹೋದನು. ಅನಂತರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನಕ್ಕೆ ಮರಳಿ ಹೋದಾಗ ಹಬ್ಬಾರ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ಹಾಜರಾಗಿ ಹೇಳಿದನು: 'ನೀವು ನನ್ನನ್ನು ಕ್ಷಮಿಸಬೇಕೆಂದು ನಾನು ನಿಮ್ಮಲ್ಲಿ ಕ್ಷಮಾಭಿಕ್ಷೆ ಬೇಡುತ್ತಿದ್ದೇನೆ. ನಾನು ತಮಗೆ ಹೆದರಿ ಓಡಿ ಹೋಗಿದ್ದೆ. ಆದರೆ ಈಗ ತಮ್ಮ ಕ್ಷಮೆ ಮತ್ತು ದಯೆ ನನ್ನನ್ನು ಮರಳಿ ತಮ್ಮ ಬಳಿಗೆ ತಂದಿದೆ. ಓ ಅಲ್ಲಾಹನ ಪ್ರವಾದಿ, ನಾವು ಅಜ್ಞಾನಿ (ಜಾಹಿಲ್) ಆಗಿದ್ದೆವು. ನಾವು ಬಹುದೇವಾರಾಧಕರಾಗಿದ್ದೆವು. ಅಲ್ಲಾಹನು ತಮ್ಮ ಮೂಲಕ ನಮಗೆ ಮಾರ್ಗದರ್ಶನ ನೀಡಿದನು ಮತ್ತು ನಾಶದಿಂದ ರಕ್ಷಿಸಿದನು. ನಾನು ನನ್ನ ದುಷ್ಕರ್ಮಗಳ ಬಗ್ಗೆ ಕ್ಷಮೆಯಾಚಿಸುತ್ತೇನೆ. ನನ್ನ ಅಜ್ಞಾನವನ್ನು ಕಡೆಗಣಿಸಿ ನನ್ನನ್ನು ಕ್ಷಮಿಸಿರಿ'. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಪುತ್ರಿಯ ಹಂತಕನನ್ನು ಕ್ಷಮಿಸಿ ಹೇಳಿದರು: ಓ ಹಬ್ಬಾರ್ ನೀನು ಹೋಗು. ನಾನು ನಿನ್ನನ್ನು ಕ್ಷಮಿಸಿರುವೆನು. ನಿನಗೆ ಇಸ್ಲಾಮ್ ಸ್ವೀಕರಿಸುವ ಭಾಗ್ಯ ನೀಡಿರುವುದು ಅಲ್ಲಾಹನ ಔದಾರ್ಯವಾಗಿದೆ ಎಂದು ಹೇಳಿದರು. ಈ ರೀತಿ ಅಪರಾಧಿಯ ಸುಧಾರಣೆ ಆಗಿದೆ ಎಂದು ಕಂಡಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಮಗಳ ಹಂತಕನನ್ನು ಕ್ಷಮಿಸಿದರು.

ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ವಿರುದ್ಧ ಯಾರಾದರೂ ಅಪರಾಧ ಮಾಡಿದರೆ ಅದಕ್ಕೆ ಪ್ರತೀಕಾರ ಮಾಡುತ್ತಿರಲಿಲ್ಲ. ಈ ಕಾರಣದಿಂದಲೇ ಅವರು ತನ್ನ ಆಹಾರದಲ್ಲಿ ವಿಷ ಬೆರೆಸಿದ ಯಹೂದಿ ಸ್ತ್ರೀಗೂ ಕ್ಷಮೆ ನೀಡಿದರು. ಅದೇ ರೀತಿ ಉಹುದ್ ಯುದ್ಧದ ಸಂದರ್ಭದಲ್ಲಿ ತನ್ನ ಚಿಕ್ಕಪ್ಪ ಹಝ್ರತ್ ಹಮ್ಝರವರ ಯಕೃತ್ತನ್ನು ಜಗಿದ ಹಿಂದಳಿಗೂ ಕ್ಷಮೆ ನೀಡಿದರು. ಹಿಂದ ಆ ಕ್ಷಮೆಯಿಂದ ಬಹಳ ಪ್ರಭಾವಿತಳಾಗಿ ಪೂರ್ಣ ಬದಲಾಗಿಬಿಟ್ಟಳು. ಬಹಳ ನಿಷ್ಠಾವಂತೆಯಾದಳು. ಅದೇ ದಿನ ಆಕೆ ಎರಡು ಕುರಿಗಳನ್ನು ಕೊಯಿದು ಪಾಕ ಮಾಡಿ ಸತ್ಕಾರವಾಗಿ ಕಳುಹಿಸಿ ಕೊಟ್ಟಳು. ಈಗ ಜಾನುವಾರುಗಳು ಕಡಿಮೆಯಾಗಿವೆ, ನನ್ನ ಈ ಚಿಕ್ಕ ಪಾರಿತೋಷಿಕ ಅಂಗೀಕರಿಸಿರಿ ಎಂದು ಭಿನ್ನವಿಸಿದಳು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರಾರ್ಥಿಸಿದರು: ಹಿಂದಳ ಜಾನುವಾರು ಹಿಂಡಿನಲ್ಲಿ ಅನುಗ್ರಹ ಸುರಿಯಲಿ ಎಂದು. ಅನಂತರ ಆಕೆ ಎಷ್ಟು ಜಾನುವಾರುಗಳ ಹಿಂಡುಗಳಿಗೆ ಮಾಲಿಕಳಾದಳೆಂದರೆ ಅವುಗಳನ್ನು ನೋಡಿಕೊಳ್ಳಲು ಕಷ್ಟವಾಗುತ್ತಿತ್ತು.

ಅಬ್ದುಲ್ಲಾ ಬಿನ್ ಉಬಯ್ಯಿಬ್ನು ಸುಲೂನನು ತನ್ನ ವಿರುದ್ಧ ಮಾಡಿದ ಎಲ್ಲ ಮಾನಹಾನಿಕರ ವರ್ತನೆಗಳನ್ನೂ ಕ್ಷಮಿಸಿದರು. ಅವನು ನಿಧನ ಹೊಂದಿದಾಗ ಜನಾಝ ನಮಾಝ್ ಅನುಷ್ಠಿಸಿದರು. ಕಅಬ್ ಬಿನ್ ಝುಹೇರ್ ಒಬ್ಬ ಪ್ರಸಿದ್ಧ ಕವಿಯಾಗಿದ್ದನು. ಅವನ ಕೆಲವು ಅಪರಾಧಗಳ ಕಾರಣ ಅವನಿಗೆ ಶಿಕ್ಷೆಯ ತೀರ್ಪು ಆಗಿತ್ತು. ಮಕ್ಕ ವಿಜಯದ ನಂತರ ಈ ಕವಿಯ ಸಹೋದರ ಅವನಿಗೆ ಹೀಗೆ ತಿಳಿಸಿದ: ನೀನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಕ್ಷಮೆಯನ್ನು ಯಾಚಿಸು. ಹಾಗೆ ಆತನು ಮದೀನಕ್ಕೆ ಬಂದು ತನ್ನ ಪರಿಚಯದವನ ಮನೆಯಲ್ಲಿ ತಂಗಿದನು. ಫಜರ್ ವೇಳೆಯಲ್ಲಿ ಮಸ್‌ಜಿದ್ ನಬವಿಗೆ ಬಂದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹಿಂದೆ ನಿಂತು ನಮಾಝ್ ಅನುಷ್ಠಿಸಿದನು. ನಮಾಝ್ ನಂತರ ಅವನು ಹಝ್ರತ್

ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ಬಂದು ಹೇಳಿದನು: ಓ ಅಲ್ಲಾಹನ ಸಂದೇಶವಾಹಕರೇ, ಕಅಬ್ ಬಿನ್ ಝುಹೀರ್ ಪಶ್ಚಾತ್ತಾಪಗೊಂಡು ಮರಳಿ ಬಂದಿದ್ದಾನೆ. ನಿಮ್ಮ ಕ್ಷಮೆ ಯಾಚಿಸುತ್ತಾನೆ ಎಂದು ಹೇಳಿದನು.

ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಕಅಬ್‌ನ ಪರಿಚಯವಿರಲಿಲ್ಲ. ಆದುದರಿಂದ ಅವನನ್ನು ಗುರುತಿಸಲಿಲ್ಲ. ಕಅಬ್ ಹೇಳಿದನು: ನೀವು ಅನುಮತಿ ನೀಡಿದರೆ ನಾನು ಕಅಬ್‌ನನ್ನು ನಿಮ್ಮ ಮುಂದೆ ತರುತ್ತೇನೆ. ಆಗ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನಾನು ಅನುಮತಿ ನೀಡುತ್ತೇನೆ ಎಂದು. ಆಗ ಕಅಬ್ ಹೇಳಿದ: ನಾನೇ ಕಅಬ್ ಬಿನ್ ಝುಹೀರ್. ಆಗ ಅನ್‌ಸಾರಿಗಳು ಅವನನ್ನು ಕೊಲ್ಲಲು ಎದ್ದು ನಿಂತರು. ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಅವನು ಕ್ಷಮೆ ಯಾಚಿಸಲು ಬಂದಿದ್ದಾನೆ. ಅವನನ್ನು ಬಿಟ್ಟು ಬಿಡಿರಿ. ಆಗ ಕವಿ ಒಂದು ಖಸೀದ ಹಾಡಿದನು. ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಂತೋಷ ಪ್ರಕಟಿಸುತ್ತಾ ತನ್ನ ಚಾದರವನ್ನು ಅವನ ಮೇಲೆ ಹೊದಿಸಿದರು.

ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕ್ಷಮಾಗುಣದ ಮಟ್ಟ ಆ ರೀತಿ ಇತ್ತು. ಅವರು ಕ್ಷಮಿಸುತ್ತಿದ್ದರಲ್ಲದೆ ಪಾರಿತೋಷಿಕ ನೀಡಿ ಶುಭಾಶೀರ್ವಾದ ನೀಡಿ ಕಳುಹಿಸುತ್ತಿದ್ದರು. ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕ್ಷಮಿಸಿದ ಅಸಂಖ್ಯಾತ ಉದಾಹರಣೆಗಳಿವೆ. ಅವರು ಪ್ರಕಟಿಸಿದ ಕ್ಷಮಾಗುಣ ಎಷ್ಟು ಉನ್ನತ ಮಟ್ಟದ್ದಾಗಿತ್ತೆಂದರೆ ಜನರು ಆಶ್ಚರ್ಯ ಚಕಿತರಾಗುತ್ತಾರೆ.

ಒಮ್ಮೆ ಒಬ್ಬ ವ್ಯಕ್ತಿ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹತ್ತಿರ ಬಂದು ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ, ನನ್ನ ಒಬ್ಬ ಸೇವಕ ತಪ್ಪು ಕೆಲಸ ಮಾಡುತ್ತಿದ್ದಾನೆ. ನಾನು ಅವನಿಗೆ ದೈಹಿಕ ಶಿಕ್ಷೆ ನೀಡಬಹುದೇ? ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನೀವು ಪ್ರತಿದಿನ ಅವನಿಗೆ ಎಪ್ಪತ್ತು ಸಾರಿ ಕ್ಷಮಿಸಿರಿ. ಎಂದರೆ ಬಹಳ ಹೆಚ್ಚು ಸಾರಿ ಕ್ಷಮಿಸಿರಿ ಎಂದು ಹೇಳಿದರು.

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಜಮಾಅತನ್ನು ಸ್ಥಾಪಿಸಿದ ಉದ್ದೇಶವು ನಾಲಗೆ, ಕಿವಿ, ಕಣ್ಣು ಮತ್ತು ಪ್ರತಿಯೊಂದು ಶರೀರಾಂಗದಿಂದ ತಖ್ವ ಹೊರ ಹೊಮ್ಮಲಿ ಎನ್ನುವುದಕ್ಕಾಗಿದೆ. ತಖ್ವದ ಪ್ರಕಾಶ ಅವುಗಳ ಒಳಗೂ ಹೊರಗೂ ಇರಲಿ. ಸದ್ಗುಣಗಳ ಅತ್ಯುನ್ನತ ಮಾದರಿ ಪ್ರಕಟಿಸಬೇಕು. ಸಿಟ್ಟು ಮೊದಲಾದವು ಸ್ವಲ್ಪವೂ ಇರಬಾರದು.

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಜಮಾಅತಿನ ಬಹುತೇಕ ಜನರಲ್ಲಿ ಸಿಟ್ಟೆಂಬ ನ್ಯೂನತೆ ಈಗಲೂ ಇದೆ. ಚಿಕ್ಕಪುಟ್ಟ ವಿಷಯಗಳಿಗೆ ಸಂಬಂಧಿಸಿ ಅಸೂಯೆ ಮತ್ತು ದ್ವೇಷ ತಲೆದೋರುತ್ತದೆ. ಪರಸ್ಪರ ಜಗಳ ಮಾಡುತ್ತಾರೆ. ಇಂತಹ ಜನರು ಜಮಾಅತಿನೊಂದಿಗೆ ಯಾವ ಭಾಗವನ್ನೂ ಹೊಂದಿರುವುದಿಲ್ಲ. ಒಬ್ಬನು ತನ್ನನ್ನು ಬೈದರೆ ಅದಕ್ಕೆ ಉತ್ತರ ನೀಡದೆ ಸುಮ್ಮನೆ ಇರುವುದರಲ್ಲಿ ಕಷ್ಟವೇನಿದೆ ಎಂದು ನಾನು ಯೋಚಿಸುತ್ತೇನೆ. ಪ್ರತಿಯೊಂದು ಜಮಾಅತಿನ ಸುಧಾರಣೆ ಮೊದಲು ನೈತಿಕ ಗುಣಗಳ ಸುಧಾರಣೆಯಿಂದ ಪ್ರಾರಂಭವಾಗುತ್ತದೆ. ಪ್ರಾರಂಭದಲ್ಲಿ ಸಹನೆಯಿಂದ ಅಭಿವೃದ್ಧಿ ಗಳಿಸಬೇಕು. ಎಲ್ಲದಕ್ಕಿಂತಲೂ ಉತ್ತಮ ಕಾರ್ಯವಿಧಾನವೇನೆಂದರೆ ಯಾರಾದರೂ ಬೈದರೆ ಅವನಿಗೋಸ್ಕರ ಹೃತ್ಪೂರ್ವಕವಾಗಿ ಪ್ರಾರ್ಥಿಸಬೇಕು. ನಾವು ಇಂತಹ ಉನ್ನತ ಮಟ್ಟವನ್ನು ತಲಪುವ ಭಾಗ್ಯವನ್ನು ಅಲ್ಲಾಹನು ನಮಗೆ ದಯಪಾಲಿಸಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 23-09-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon